4.	ವಿಶೇಷ ಘಟಕ ಯೋಜನೆಯಡಿ ನದಿ ಮೀನುಗಾರಿಕೆಗೆ ಸಲಕರಣೆ ಖರೀದಿಗೆ ಸಹಾಯ	24,000–00	–
5.	ಕೇಂದ್ರ ಪುರಸ್ಕೃತ ವಿದರ್ಭ ಯೋಜನೆಯಡಿ ಮೀನು ಕೃಷಿ ಕೊಳ ನಿರ್ಮಾಣಕ್ಕೆ ಸಹಾಯಧನ	2,23,823–00	–
6.	ವಿಶೇಷ ಘಟಕ ಯೋಜನೆ	–	25,000–00
7.	ಗಿರಿಜನ ಉಪ ಯೋಜನೆ	–	5,000–00
8.	ಮೀನುಮರಿ ಖರೀದಿಗೆ ಸಹಾಯಧನ	–	9,154–00
	ಒಟ್ಟು	3,14,803	96,452–00

ಸರ್ವ ಶಿಕ್ಷಣ ಅಭಿಯಾನ

449 (682) ಶ್ರೀ ಮುನಿರಾಜು ಎಸ್. (ದಾಸರಹಳ್ಳಿ):– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ದಾಸರಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಮಂಜೂರಾಗಿರುವ ಶಾಲೆಗಳೆಷ್ಟು (ವಿವರ ನೀಡುವುದು) ;

ಆ) ಈ ಶಾಲೆಗಳಲ್ಲಿ ಹೆಚ್ಚುವರಿ ಕೊಠಡಿಗಳನ್ನು ನಿರ್ಮಿಸಲು ತಗುಲಿದ ಒಟ್ಟು ವೆಚ್ಚವೆಷ್ಟು (ಮಾಹಿತಿ ನೀಡುವುದು) ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–

ಅ) ದಾಸರಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಈ ಕೆಳಕಾಣಿಸಿರುವ 4 ಹೊಸ ಶಾಲೆಗಳು ಮಂಜೂರಾಗಿರುತ್ತವೆ.

2006–07ನೇ ಸಾಲಿನಲ್ಲಿ ತೆರೆದಿರುವ ಹೊಸ ಶಾಲೆಗಳು	*ಕಟ್ಟಡ ನಿರ್ಮಾಣಕ್ಕಾಗಿ ಬಿಡುಗಡೆ ಮಾಡಿರುವ ಅನುದಾನ ವೆಚ್ಚ*
1. ಸ.ಕಿ.ಪ್ರಾ.ಶಾಲೆ, ನಾಗಸಂದ್ರ ಕಾಲೋನಿ	ರೂ. 9.00 ಲಕ್ಷಗಳು
2. ಸ.ಕಿ.ಪ್ರಾ.ಶಾಲೆ, ಶುಶೃತಿನಗರ	ರೂ. 4.25 ಲಕ್ಷಗಳು
3. ಸ.ಕಿ.ಪ್ರಾ.ಶಾಲೆ, ಅಬ್ಬಿಗೆರೆ ಕಾಲೋನಿ	ರೂ. 4.25 ಲಕ್ಷಗಳು

2008–09ನೇ ಸಾಲಿನಲ್ಲಿ ತೆರೆದಿರುವ ಹೊಸ ಶಾಲೆ	*ಕಟ್ಟಡ ನಿರ್ಮಾಣಕ್ಕಾಗಿ ಬಿಡುಗಡೆ ಮಾಡಿರುವ ಅನುದಾನ ವೆಚ್ಚ*
1. ಸ.ಕಿ.ಪ್ರಾ.ಶಾಲೆ, ಗೃಹಲಕ್ಷ್ಮೀಲೇಔಟ್	ರೂ. 9.00 ಲಕ್ಷಗಳು

ಆ) ಈ ಶಾಲೆಗಳ ಪೈಕಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ನಾಗಸಂದ್ರ ಶಾಲೆಗೆ ಎರಡು ಹೆಚ್ಚುವರಿ ಕೊಠಡಿಗಳನ್ನು ನಿರ್ಮಿಸಲಾಗಿದೆ. ಅದಕ್ಕೆ ತಗುಲಿದ ವೆಚ್ಚ ರೂ. 7.60 ಲಕ್ಷಗಳು.

ಪಿ.ಎಂ.ಜಿ.ಎಸ್. ಯೋಜನೆಯ ರಸ್ತೆ ಕಾಮಗಾರಿ

450 (683) ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು):– ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕಳೆದ ಎರಡು ವರ್ಷಗಳಲ್ಲಿ ಸಿಂಧನೂರು ತಾಲ್ಲೂಕಿಗೆ ಪಿಎಂಜಿಎಸ್ ಯೋಜನೆಯಡಿ ಮಂಜೂರಾಗಿರುವ ರಸ್ತೆಗಳ ಸಂಖ್ಯೆ ಎಷ್ಟು ಮತ್ತು ಯಾವುವು (ವಿವರ ನೀಡುವುದು) ;

ಆ) ಸಿಂಧನೂರು ತಾಲ್ಲೂಕಿಗೆ ಪಿಎಂಜಿಎಸ್ ಯೋಜನೆಯಡಿ ಮಂಜೂರಾದ ರಸ್ತೆಗಳಿಗೆ ಸರ್ಕಾರ ನಿಗದಿಪಡಿಸಿರುವ ಅನುದಾನದ ಮೊತ್ತವೆಷ್ಟು ; (ರಸ್ತೆ ಮತ್ತು ವರ್ಷವಾರು ವಿವರ ನೀಡುವುದು)

ಇ) ಸಿಂಧನೂರು ತಾಲ್ಲೂಕಿಗೆ ಪಿಎಂಜಿಎಸ್ ಯೋಜನೆಯಡಿ ಮಂಜೂರಾಗಿರುವ ರಸ್ತೆಗಳ ಕಾಮಗಾರಿಯು ಕಳಪೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಈ) ಹಾಗಿದ್ದಲ್ಲಿ, ಈ ರಸ್ತೆಗಳ ಕಾಮಗಾರಿಯನ್ನು ನಿರ್ವಹಿಸಿದ ಗುತ್ತಿಗೆದಾರರ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

ಉ) ಈ ರೀತಿ ಕಳಪೆ ಕಾಮಗಾರಿ ಮಾಡಿದ ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ ಸೇರಿಸಲಾಗುವುದೇ ;

ಊ) ಹಾಗಿದ್ದಲ್ಲಿ ಎಂದು ಸೇರಿಸಲಾಗುವುದು ?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವರು):–

ಅ) ಕಳೆದ ಎರಡು ವರ್ಷಗಳಲ್ಲಿ ಸಿಂಧನೂರು ತಾಲ್ಲೂಕಿಗೆ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ 9 ರಸ್ತೆ ಕಾಮಗಾರಿಗಳು ಮಂಜೂರಾಗಿರುತ್ತವೆ. ಅವುಗಳ